ನೀರಾವರಿಯಾಗುವುದು. ಗ್ರಾಮವಾರು ವಿವರಗಳು ಯೋಜನೆಯ ವರದಿ ಪೂರ್ಣಗೊಂಡ ನಂತರ ಗುರುತಿಸಬಹುದುದಾಗಿದೆ.

ಊ) ಯೋಜನೆಯ ರೂಪರೇಷೆಯನ್ನು ತಾಂತ್ರಿಕ ಸಮಿತಿಯ ಹಲವಾರು ಸೂಚನೆಗಳಿಗನುಸಾರ ತಯಾರಿಸಬೇಕಾದ್ದುದರಿಂದ ವಿಳಂಬವಾಗಿದೆ.

ಸಂಗೊಳ್ಳಿಯಲ್ಲಿ ಶಾಲಾ ಕೋಣೆಗಳನ್ನು ಕಟ್ಟುವ ಬಗ್ಗೆ

2163: ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿಯಲ್ಲಿ ನೀರಾವರಿ ಇಲಾಖೆಯವರು ಕಟ್ಟಿದ ಶಾಲೆಯನ್ನು ಕೆಡವಿ ಆದೇ ಸಾಮಾನುಗಳನ್ನು ಉಪಯೋಗಿಸಿ ಶಾಲೆಯ ಕಟ್ಟಡ ಕಟ್ಟಲು ಆಂದಿನ ಲೋಕೋಪಯೋಗಿ ಸಚಿವರು ಆದೇಶ ನೀಡಿದ್ದರೂ ಯಾವುದೇ ಕ್ರಮಕ್ಕೆಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಸಂಗೊಳ್ಳಿಯಲ್ಲಿ ದುಸ್ಥಿತಿಯಲ್ಲಿದ್ದ ಶಾಲಾ ಕಟ್ಟಡವನ್ನು ಕೆಡವಲು ದಿನಾಂಕ 2.5.1992ರ ಸರ್ಕಾರಿ ಪತ್ರದಲ್ಲಿ ಅನುಮತಿ ನೀಡಲಾಗಿದೆ. ಸದರಿ ಕಟ್ಟಡದಲ್ಲಿ ಸಿಕ್ಕಬಹುದಾದ ಉಪಯುಕ್ತ ವಸ್ತುಗಳನ್ನು ಉಪಯೋಗಿಸಿ ಶಾಲಾ ಕಟ್ಟಡವನ್ನು ಪುನರ್ ನಿರ್ಮಾಣ ಮಾಡುವ ಬಗ್ಗೆ ಪ್ರಸ್ತಾವನೆಯು ಯೋಜನಾ ಮಟ್ಟದಲ್ಲಿ ತಯಾರಿಕೆಯ ಹಂತದಲ್ಲಿದೆ.

ಆ) ಅಂದಾಜು ಪಟ್ಟಿ ತಯಾರಿಸಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಬೈಲಹೊಂಗಲ ತಾಲ್ಲೂಕ್ ಪೈಕಿ ಮೈಕೇಲ ಮರಡಿ ನೀರಾವಿರಿ ಕೆಲಸ ಪ್ರಾರಂಭ

650: ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕ್ ಪೈಕಿ ಮೈ ಕೇಲಮರಡಿ ನೀರಾವರಿ ಕೆಲಸ 1992–93ನೇ ಸಾಲಿನಲ್ಲಿ ಆಯವ್ಯಯ ಪಟ್ಟಿಯಲ್ಲಿ ಸೇರಿರುವುದು ನಿಜವೇ;

ಆ) 1992–93ನೇ ಸಾಲಿನಲ್ಲಿ ಈ ಕೆಲಸಕ್ಕೆ ಎಷ್ಟು ಹಣವನ್ನು ಒದಗಿಸಲಾಗಿದೆ;

ಇ) ಈ ಕೆಲಸಕ್ಕೆ ಸರ್ಕಾರದಿಂದ ಆಡಳಿತಾತ್ಮಕ ಮಂಜುರಾತಿಯನ್ನು ಇದುವರೆಗೂ ಕೊಡದೇ ಇದ್ದದ್ದರಿಂದ ಈ ಕೆಲಸಗಳು ಪ್ರಾರಂಭವಾಗಿರುವುದಿಲ್ಲವೆಂಬುದು ನಿಜವೇ;

ಈ) ಹಾಗಿದ್ದಲ್ಲಿ ಎಷ್ಟು ದಿವಸಗಳಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗುವುದು;

ಉ) ಉತ್ತರ ಕರ್ನಾಟಕ ನೀರಾವರಿ ಕೆಲಸಗಳು ಆಯವ್ಯಯ ಪಟ್ಟಿಯಲ್ಲಿ ಸೇರಿದ್ದರೂ ಕೂಡ ಆ ಕೆಲಸಗಳು ಬೇಗ ಪ್ರಾರಂಭವಾಗಬಾರದೆಂಬ ಉದ್ದೇಶದಿಂದ ಹಾಗೂ ಸರ್ಕಾರದಲ್ಲಿ ಹಣ ಇಲ್ಲದೆ

ಇರುವುದರಿಂದ ವಿನಾಕಾರಣ ಕೆಲವೊಂದು ಮಂಜೂರಾತಿ ನೀಡದೆ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ ಅಂಥಹ ಅಧಿಕಾರಿಗಳ ಮೇಲೆ ಸರ್ಕಾರದವರು ಯಾವ ಕ್ರಮವನ್ನು ಕೈಗೊಳ್ಳುವರು;

ಋ) ಈ ಕೆಲಸಕ್ಕೆ ಒದಗಿಸಿದ ಹಣವನ್ನು ಇದೇ ವರ್ಷ ಖರ್ಚಾಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ನಿಜ.

ಆ) 20.00 ಲಕ್ಷ ರೂ.ಗಳು

ಇ) ನಿಜ.

ಈ) ದಿನಾಂಕ 11-3-93ರ ಸರ್ಕಾರದ ಆದೇಶ ಸಂಖ್ಯೆ: ನೀ ಇ 135 ಸನೀಬೆ 92ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದೆ.

ಉ) ಇಲ್ಲ.

ಊ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಋ) ಸಾಧ್ಯವಿದ್ದಷ್ಟು ಮೆಟ್ಟಿಗೆ ಕ್ರಮ ಕೈಗೊಳ್ಳಲಾಗುವುದು.

ಬೈಲಹೊಂಗಲ ತಾಲ್ಲೂಕು ವಕ್ಕುಂದ ಹಾಗೂ ಸವದತ್ತಿ ತಾಲ್ಲೂಕು ಗ್ರಾಮಗಳಲ್ಲಿ ಮಲಪ್ರಭಾ ಪುನರ್ವಸತಿ

651: ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಭಾರಿ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ವಕ್ಕುಂದ ಹಾಗೂ ಸವದತ್ತಿ ತಾಲ್ಲೂಕಿನ ಸುತಗಟ್ಟಿ ಗ್ರಾಮಗಳಲ್ಲಿ ಮಲಪ್ರಭಾ ಪುನರ್ವಸತಿ ಜನರ ಅನುಕೂಲತೆಗಾಗಿ ಶಾಲಾ ಕೊಠಡಿಗಳನ್ನು ಕಟ್ಟಲು ಮಾನ್ಯ ನೀರಾವರಿ ಸಚಿವರ ಆದೇಶದ ಪ್ರಕಾರ ನೀರಾವರಿ ಇಲಾಖೆ ಪತ್ರ ನಂ:ಐಡಿ 312 ಎನ್‌ಐಎನ್ 91 ದಿನಾಂಕ 27–12–91ನೇ ಪ್ರಾಕಾರ ಮುಖ್ಯ ಇಂಜಿನಿಯರ್, ನೀರಾವರಿ ಇಲಾಖೆ ಉತ್ತರ ವಲಯ, ಬೆಳಗಾಂ ಇವರಿಗೆ ಆದೇಶ ನೀಡಿರುವುದು ನಿಜವೇ;

ಆ) ಮುಖ್ಯ ಇಂಜಿನಿಯರ್, ನೀರಾವರಿ ಇಲಾಖೆ, ಉತ್ತರ ವಲಯ, ಬೆಳಗಾವಿ, ಇವರು ಪುನಃ ಸರ್ಕಾರಕ್ಕೆ ಈ ಕಟ್ಟಡಗಳನ್ನು ಕಟ್ಟಲು ಅನುಮತಿ ಕೇಳಿದ್ದಕ್ಕೆ ಸರ್ಕಾರದವರು ಈ ಕಟ್ಟಡಗಳನ್ನು ಈ ಮೊದಲೇ ಆದೇಶ ನೀಡಿದಂತೆ ಕಟ್ಟಬೇಕೆಂದು ದಿನಾಂಕ: 27–4–92 ರಂದು ಪುನಃ ಒಪ್ಪಿಗೆ ನೀಡಿರುವುದು ನಿಜವೇ;

ಇ) ವಾಸ್ತುಶಿಲ್ಪಿಗಳು ಸರ್ಕಾರವು ಈ ಕಟ್ಟಡಗಳನ್ನು ಕಟ್ಟಲು ನಕಾಶೆ ತಯಾರಿಸಿ ಕಾರ್ಯಕಾರಿ ಅಭಿಯಂತರರು ಮಲಪ್ರಭಾ ಪ್ರೊಜೆಕ್ಟ್, ನವಿಲುತೀರ್ಥ, ಇವರಿಗೆ ಕಳುಹಿಸಿರುವುದು ನಿಜವೇ;